1) ಬೆಂಗಳೂರು ನಗರದಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಕಳಪೆ ಗುಣ ಮಟ್ಟದ ಅಕ್ಕಿಯನ್ನು ಸರಬರಾಜು ಮಾಡಲಾಗುತ್ತಿದ್ದುದು ಸರ್ಕಾರದ ಗಮನಕ್ಕೆ ಬಂದಿದೆ?

2) ಹಾಗಿದ್ದಲ್ಲಿ ಈ ಕಳಪೆ ದರ್ಜೆಯ ಅಕ್ಕಿಯನ್ನು ಭಾರತ ಆಹಾರ ನಿಗಮಕ್ಕೆ ಹಿಂದುರಿಗಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು?

3) ನ್ಯಾಯಬೆಲೆ ಅಂಗಡಿಗಳ ಮೂಲಕ ಒಳ್ಳೆ ಗುಣ ಮಟ್ಟದ ಅಕ್ಕಿಯನ್ನು ವಿತರಿಸಲು ಕೈಗೊಂಡ ಕ್ರಮಗಳಾವುವು?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಭಾರತ ಆಹಾರ ನಿಗಮವು ಪಂಜಾಬು ರಾಜ್ಯದಿಂದ ಪಡೆದ ಅಕ್ಕಿಯನ್ನು ಸರಬರಾಜು ಮಾಡುತ್ತಿದೆ ಒಮ್ಮೊಮ್ಮೆ ಈ ಅಕ್ಕಿಯ ಗುಣಮಟ್ಟ ಕಳಪೆಯಾಗಿರುತ್ತದೆ.

ಆ) ಈ ಅಕ್ಕಿಯು ಮಾನವ ಬಳಕೆಗೆ ಯೋಗ್ಯವಾಗಿಲ್ಲದಿದ್ದಕ್ಕೆ ಇದನ್ನು ಹಿಂದಿರುಗಿಸಿ ಒಳ್ಳೆಯ ಗುಣಮಟ್ಟದ ಅಕ್ಕಿಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸಾರ್ವಜನಿಕ ವಿತರಣೆಗೆ ಒಳ್ಳೆಯ ಗುಣ ಮಟ್ಟದ ಅಕ್ಕಿಯನ್ನು ಸರಬರಾಜು ಮಾಡಲು ಭಾರತ ಆಹಾರವನ್ನು ನಿಗಮವನ್ನು ಕೋರಲಾಗಿದೆ. ಉಪಯೋಗಿಸಲು ಯೋಗ್ಯವಾಗಿಲ್ಲದ ಅಕ್ಕಿಯನ್ನು ಅಂಗೀಕರಿಸಲಾಗುತ್ತಿಲ್ಲ. ಮತ್ತು ಬಾರತ ಆಹಾರ ನಿಗಮದಿಂದ ಇದನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆ.

ಬೆಂಗಳೂರು ಸಿಟಿಯಲ್ಲಿ ಸೂಪರ್ ಡಿಲಕ್ಸ್ ಬಸ್

176 - ಶ್ರೀ ರಾಮಲಿಂಗರೆಡ್ಡಿ, (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರ ಸಾರಿಗೆಯಿಂದ ಸುವಿಹಾರಿ ಬಸ್ಸುಗಳನ್ನು ಬೆಂಗಳೂರು ನಗರದಲ್ಲಿ ಓಡಿಸುತ್ತಿದ್ದಾರಾ?

ಆ) ಹಾಗಿಲ್ಲದ ಪಕ್ಷದಲ್ಲಿ ಸರ್ಕಾರ ಸುವಿಹಾರಿ ಬಸ್ಸುಗಳನ್ನು ವಿಶೇಷ ದರಗಳಲ್ಲಿ ಅತಿ ಜನಸಂದಣಿ ಇರುವಂತ ಮಾರ್ಗಗಳಲ್ಲಿ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಸದ್ಯದ ಪರಿಸ್ಥಿತಿಯಲ್ಲಿ ಬೆಂಗಳೂರು ನಗರದಲ್ಲಿ ಸುವಿಹಾರಿ ಬಸ್ಸುಗಳು ಓಡಿಸುವ ಯಾವುದೇ ರೀತಿಯ ಪ್ರಸ್ತಾವನೆ ಇರುವುದಿಲ್ಲ.

ಅಡುಗೋಡಿಯಿಂದ ಯಶವಂತಪುರಕ್ಕೆ ನೇರ ಬಸ್ ಸೌಲಭ್ಯ

882 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಡುಗೋಡಿಯಿಂದ ಯಶವಂತಪುರಕ್ಕೆ ನೇರವಾದ ಬಿ.ಟಿ.ಎಸ್. ಬಸ್ಸು ಸೌಲಭ್ಯ ಇಲ್ಲದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರವು ಮಾರ್ಗ ಸಂಖ್ಯೆ 171-ಬಿ ಬಸ್ಸನ್ನು ಹೊಂಬೇಗೌಡನಗರ, ನಿಮಾಹಿನ್ಸ್, ಬೆಂಗಳೂರು ಡೈರಿ, ಹೊನ್ನೂರು ರಸ್ತೆ ಚಿಕ್ ಪೋಸ್ಟ್

ಕೋರ ಮಂಗಲ, ಅಡುಗೋಡಿ ಮತ್ತು ಮೈಕೋ ಲೇ ಔಟ್ ಮೂಲಕ ಹಾದು ಹೋಗುವಂತೆ ರಿಂಗ್ ರೂಟ್ ಆಗಿ ಪರಿವರ್ತಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಸೂಕ್ತವಲ್ಲ

ನಿಲುಗಡೆ ಮಾಡಲಾಗಿರುವ ಔರಾದ್ ಬೆಂಗಳೂರು ಸೂಪರ್ ಡಿಲಕ್ಸ್ ಬಸ್ಸಿನ ಮರು ಸಂಚಾರ ಪ್ರಾರಂಭ

919 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಔರದ್-ಬೆಂಗಳೂರು ನಗರ ಸೂಪರ್ ಡಿಲಕ್ಸ್ ಬಸ್ಸಿನ ಸಂಚಾರವನ್ನು ಯಾವಾಗ ಪ್ರಾರಂಭಿಸಲಾಯಿತು ಮತ್ತು ಆ ಬಸ್ಸು ಯಾವ ಮಾರ್ಗಗಳ ಮೂಲಕ ಬೆಂಗಳೂರು ತಲುಪುತ್ತಿತ್ತು?

ಆ) ಆ ಬಸ್ಸು ಎಷ್ಟು ದಿನ ಈ ಮಾರ್ಗದಲ್ಲಿ ಸಂಚಾರ ಮಾಡಿರುತ್ತದೆ?

ಇ) ಯಾವುದೇ ಕಾರಣಗಳನ್ನು ನೀಡದೆ ಆ ಮಾರ್ಗದ ಬಸ್ ಸಂಚಾರವನ್ನು ಹಠಾತ್ತನೇ ನಿಲ್ಲಿಸಲು ಕಾರಣಗಳೇನು?

ಈ) ಒಂದು ವೇಳೆ ಗಳಿಕೆ ಇಲ್ಲದಿರುವುದೋ ಅಥವಾ ಪ್ರಯಾಣಿಕರಿಲ್ಲದಿರುವುದೋ ಆ ಬಸ್ಸಿನ ಸಂಚಾರವನ್ನು ನಿಲ್ಲಿಸಿದ್ದಲ್ಲಿ ಪುನಃ ಈ ಬಸ್ಸಿನ ಸಂಚಾರವನ್ನು ಔರಾದ್ -ಬೀದರ್-ಹೈದರಾಬಾದ್ ಮೂಲಕವಾಗಿ ಬೆಂಗಳೂರಿಗೆ ತಲುಪುವಂತೆ ಸಂಚಾರವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಔರದ್-ಬೆಂಗಳೂರು ಸುಖಾಸೀನ ಸಾರಿಗೆಯನ್ನು ತಾ. 17-5-1992ರಂದು ಪ್ರಾರಂಭಿಸಲಾಯಿತು. ಮತ್ತು ಸಹ ಸಾರಿಗೆಯನ್ನು ಭಾಲ್ಕಿ, ಹುಮ್ನಾಬಾದ್, ಗುಲ್ಬರ್ಗ, ಜೇವರ್ಗಿ, ಶಹಾಪುರ, ಸುರಪುರ, ಲಿಂಗಸೂಗೂರು, ಸಿಂಧನೂರು, ಸಿರುಗುಪ್ಪ, ಬಳ್ಳಾರಿ, ಚಳ್ಳಕೆರೆ, ಹಿರಿಯೂರು, ಸಿರಾ ಮತ್ತು ತುಮಕೂರು ಮಾರ್ಗವಾಗಿ ಬೆಂಗಳೂರು ತಲುಪುತ್ತಿತ್ತು.

ಆ) 88 ದಿವಸಗಳು.

ಇ) ಪ್ರಯಾಣಿಕರ ಬೆಂಬಲ ಪಡೆಯಲು ವಿಫಲವಾಗಿದ್ದರಿಂದ.

ಈ) ಆಂಧ್ರ ಪ್ರದೇಶ ಸರ್ಕಾರದೊಡನೆ ಮುಂದಿನ ಅಂತರ ರಾಜ್ಯ ಸಾರಿಗೆ ಒಪ್ಪಂದದ ಸಮಯದಲ್ಲಿ ಇದನ್ನು ಪರಿಶೀಲಿಸಲಾಗುವುದು.

ಆಹಾರ ಇಲಾಖೆಯ ವತಿಯಿಂದ ಸಂಚಾರಿ ನ್ಯಾಯಬೆಲೆ ಅಂಗಡಿ

284 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?